**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/01/ಇಎಪಿ/2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ:25-01-2018

**ಸುತ್ತೋಲೆ**

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯ 2003 ವರ್ಷದಲ್ಲಿ ಅಳವಡಿಸಲಾದ C-03 ಪಠ್ಯಕ್ರಮದ I,II,III,IV,V & VI ನೇ ಸೆಮಿಸ್ಟರ್‌ಗಳ ಸಮಾನತೆ ಇಲ್ಲದ ಪಠ್ಯ ವಿಷಯಗಳ ಪರೀಕ್ಷೆ ಕುರಿತು.

ಉಲ್ಲೇಖ: 1) ತಾಂತ್ರಿಕ ಪರೀಕ್ಷಾ ಮಂಡಳಿಯ 167ನೇ ಕೇಂದ್ರೀಯ ಸಭೆಯ ನಿರ್ಣಯ.
2) ಈ ಕಛೇರಿ ಅಧಿಸೂಚನೆ ಸಂಖ್ಯೆ:ಬಿಟಿಇ/01/ಇಎಪಿ/2017 ದಿ:24-01-2018

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ದಿನಾಂಕ:22-01-2018ರಂದು ಜರುಗಿದ ತಾಂತ್ರಿಕ ಪರೀಕ್ಷಾ ಮಂಡಳಿಯ 167ನೇ ಕೇಂದ್ರೀಯ ಸಭೆಯಲ್ಲಿ ನಿರ್ಣಯಿಸಿರುವಂತೆ, 2003 ರ ಸೆಮಿಸ್ಟರ್ ಪಠ್ಯಕ್ರಮದ (C-03) ಒಂದು, ಎರಡು, ಮೂರು, ನಾಲ್ಕು, ಐದು ಮತ್ತು ಆರನೇ ಸೆಮಿಸ್ಟರ್‌ಗಳ C-09 ಪಠ್ಯಕ್ರಮದಲ್ಲಿ ಸಮಾನತೆ ಇಲ್ಲದ ಪಠ್ಯವಿಷಯಗಳಿಗೆ 2017ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಯೇ ಅಂತಿಮ ಅವಕಾಶವಾಗಿದ್ದು ನಂತರದ ಮುಂದಿನ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ. ಅಂತಹ ವಿದ್ಯಾರ್ಥಿಗಳಿಗೆ 2018 ರ ಏಪ್ರಿಲ್/ಮೇ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿಲ್ಲವಾದ್ದರಿಂದ ಪರೀಕ್ಷಾ ಮತ್ತು ರೂ.1000/- ವಿಶೇಷ ಶುಲ್ಕ ಪಡೆಯಬಾರದೆಂದು ಎಲ್ಲಾ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಮುಂದುವರೆದು ಉಲ್ಲೇಖ(2) ರ ಅಧಿಸೂಚನೆಯಲ್ಲಿನ ಪುಟ 2 ರ ಸೂಚನೆ (iii) ರಲ್ಲಿ ಮುದ್ರಣ ದೋಷದಿಂದ "ಅಂತಹ ವಿದ್ಯಾರ್ಥಿಗಳಿಂದ ರೂ.1000/- ವಿಶೇಷ ಶುಲ್ಕ ಪಡೆಯುವಂತೆ ತಿಳಿಸಲಾಗಿದೆ" ಎಂಬುದನ್ನು ***"ಅಂತಹ ವಿದ್ಯಾರ್ಥಿಗಳಿಂದ ರೂ.1000/- ವಿಶೇಷ ಶುಲ್ಕ ಪಡೆಯಬಾರದೆಂದು ತಿಳಿಸಲಾಗಿದೆ"*** ಎಂದು ಓದಿಕೊಳ್ಳುವಂತೆ ತಿಳಿಸಲಾಗಿದೆ.

ಈ ವಿಷಯವನ್ನು ಎಲ್ಲಾ ವಿದ್ಯಾರ್ಥಿಗಳ, ಉಪನ್ಯಾಸಕರ ಮತ್ತು ಸಿಬ್ಬಂದಿ ವರ್ಗದವರ ಗಮನಕ್ಕೆ ತರುವಂತೆ ಮತ್ತು ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಲಾಗಿದೆ. ಈ ಸುತ್ತೋಲೆಯನ್ನು ಅಂತಹ ವಿದ್ಯಾರ್ಥಿಗಳ ವಿಳಾಸಕ್ಕೆ ತಪ್ಪದೇ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಿ ದಾಖಲೆಯನ್ನು ಸಂಗ್ರಹಿಸಿ ಇಡಲು ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,
ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳ ಮಾಹಿತಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ.

ಪ್ರತಿ,
1) ಇಸಿಎಸ್ ವಿಭಾಗ
2) ಇ - ಗವರ್ನೆನ್ಸ್ ವಿಭಾಗಕ್ಕೆ - ವೆಬ್ ಸೈಟ್‌ನಲ್ಲಿ ಪ್ರಕಟಿಸಲು
2) ಗಣಕ ಕೇಂದ್ರಕ್ಕೆ - ವೆಬ್ ಸೈಟ್‌ನಲ್ಲಿ ಪ್ರಕಟಿಸಲು
3) ಕಾರ್ಯದರ್ಶಿಯವರ ಆಪ್ತ ಶಾಖೆ
4) ಕಡತಕ್ಕೆ